# ಆಹಾ ಸುದ್ದಿ!

★ ಸಸಿತೋಟ



ಆರ್ಟ್ ಇನ್‌ಸ್ಟಾಲೇಶನ್ ಇತ್ತೀಚೆಗೆ ಅತ್ಯಂತ ಜನಪ್ರಿಯವಾದ ಕಲಾ ಪ್ರದರ್ಶನ ವಿಭಾಗ. ಆದರೆ ಲಿಥುವಾನಿಯಾದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ರೀತಿ ಸರ್ಕಸ್ ಮಾಡಿ 'ಬಾಡೀಸ್ ಇನ್ನ ಅರ್ಬನ್ ಸ್ಪೇಸ್' ಎಂಬ ತಲೆಬರಹ ಕೊಟ್ಟುಕೊಂಡು ನೇತಾಡಿದರು. ನಗರದಲ್ಲಿನ ವಾಸ್ತುವ್ಯದ ಬಗ್ಗೆ ಕೆಳಗಿನಿಂದ ಮೇಲೆ ಯೋಚಿಸಬೇಕೋ ಅಥವಾ ಮೇಲಿನಿಂದ ಕೆಳಗೋ ಎಂಬುದನ್ನು ಜನ ಇದನ್ನು ನೋಡಿ ಅರ್ಥ ಮಾಡಿಕೊಂಡಿರಬಹುದು.

ಅಮೆರಿಕಾದ ಓಹಿಯೊದಲ್ಲಿ ಎರಡು ವರ್ಷಗಳ ಹಿಂದೆ ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದ ಕಳ್ಳನೊಬ್ಬ ಪೆರೋಲ್ ಮೇಲೆ ಬಿಡುಗಡೆಯಾದ ದಿನವೇ ಮತ್ತೆ ಆದೇ ಬ್ಯಾಂಕಿನ ದರೋಡೆ ಮಾಡಿ ಸಿಕ್ಕಿ ಬಿದ್ದಿದ್ದಾನೆ. ಲೆವಿಸ್ ಎಂಬ ಈ ಭೂಪನಿಗೆ ಆದೇನು ಸೆಳೆತವಿತ್ತೋ!



ಜಪಾನಿನಲ್ಲಿ ಅಂತ್ಯಕ್ರಿಯೆ ನಡೆಸುವವರಿಗೆ ಈಗ ಬಿಡುವಿಲ್ಲದ ಕೆಲಸವಂತೆ. ಮಂತ್ರ ಹೇಳುವುದು, ಗಂಧದ ಕಡ್ಡಿಯ ಹೊಗೆ ತೋರುತ್ತ, ಅಗಲಿದ ಆತ್ಮಕ್ಕೆ ಶಾಂತಿ ಕೋರುವುದು... ಆದರೆ ನಿಧನ ಹೊಂದಿದ್ದು ಸೋನಿ ಕಂಪೆನಿಯ ಐಬೊ ರೊಬಾಟ್ ನಾಯಿಗಳು. ಕಂಪೆನಿ ಈ ರೊಬೊ ನಾಯಿಗಳ ಉತ್ಪಾದನೆ ನಿಲ್ಲಿಸಿದ್ದು, ರಿಪೇರಿಯನ್ನೂ ಸ್ಥಗಿತಗೊಳಿಸಲಾಗಿದೆ. ಹೀಗಾಗಿ ಮಾಲೀಕರು ಅಗಲಿದ ನಾಯಿಗಳ ಆತ್ಮಕ್ಕೆ ಶಾಂತಿ ಕೋರಿ ಹಳೆಯ ಯಂತ್ರದ ಭಾಗಗಳನ್ನು ಬಳಸುವ ಗುಜರಿ ಕಂಪೆನಿಗೆ ದೇಹದಾನ ಮಾಡಿದ್ದಾರಂತೆ.



ಇಂಗ್ಲೆಂಡಿನಲ್ಲಿ ಲೆಸ್ ಟೆರಿಬಲ್ಸ್ ಎಂಬ ಸಂಘಟನೆ ನಿಷೇಧಕ್ಕೆ ಒಳಪಟ್ಟ, ಅರೆ ಸುಟ್ಟ, ನೀರಿನಲ್ಲಿ ನೆಂದ ಪುಸ್ತಕಗಳನ್ನು ಕಲೆ ಹಾಕಿ ಗ್ರಂಥಾಲಯದಲ್ಲಿ ಗುಡ್ಡೆ ಹಾಕಿದೆ. ಅದೀಗ ಅತ್ಯುತ್ತಮ ಪ್ರದರ್ಶನ ಎಂದು ತಾರೀಫು ತಗೊಂಡಿದೆಯಂತೆ. ಮನೆಯಲ್ಲಿ ರದ್ದಿ ರಾಶಿ ಹಾಕಿಕೊಂಡವರಿಗೆ ಕೇಳಿಸಿತೇ?

ಅರ್ಮೇನಿಯಾದಲ್ಲಿ ಇತ್ತೀಚೆಗೆ ಸರ್ಕಾರದ ವಿರುದ್ಧ ಜನ ಪ್ರತಿಭಟನೆ ನಡೆಸಿದರಂತೆ. ರಸ್ತೆಯ ಮಧ್ಯದಲ್ಲೇ ಅಲ್ಲಲ್ಲಿ ಟೆಂಟ್ ಹಾಕಿಕೊಂಡು ರಸ್ತೆ ತಡೆ ನಡೆಸಿದರಂತೆ. ನಿಜವಾದ ರಸ್ತೆ ತಡೆ ಐಡಿಯ ತಮ್ಮದೇ ಎಂದುಕೊಂಡವರಿಗೆ ಹೀಗೊಂದು ಹೊಸ ಐಡಿಯ ಸಿಕ್ಕಿರಬಹುದು.



ಶಾಲೆಯಲ್ಲಿ ಯಾವುದಾದರೂ ವಿಷಯದ ಬಗ್ಗೆ ಪ್ರಸೆಂಟೇಶನ್ ಬಹು ಮುಖ್ಯ. ಆದರೆ ಇಂಗ್ಲೆಂಡಿನ ಶಾಲೆಯೊಂದರಲ್ಲಿ ವಿದ್ಯಾರ್ಥಿ ನೀಲಿ ಚಿತ್ರದ ತಾರೆಯೊಬ್ಬಳ ಮೇಲೆ ಗಹನವಾದ ಅಧ್ಯಯನ ನಡೆಸಿ ವಿಷಯ ಮಂಡಿಸಿದ್ದಾನಂತೆ. ಸ್ಲೈಡ್ ಶೋ ಮೂಲಕ ವಿವರಣೆ ನೀಡಿದ್ದು, ಆ ವಿಡಿಯೋ ಈಗ ವೈರಲ್ ಆಗಿದೆ. ಅಧ್ಯಯನಕ್ಕೆ ಯಾವ ವಿಷಯವಾದರೂ ಅಡ್ಡಿಯಿಲ್ಲ ಎಂದು ಶಿಕ್ಷಕರು ಹೇಳಿದ್ದೇ ಈ ಎಡವಟ್ಟಿಗೆ ಕಾರಣವಂತೆ.